**ಇಂದು ದಿನಾಂಕ 03.08.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

6. ಬೆಂಗಳೂರಿನಲ್ಲಿ ವತ್ಸಲಾ ಇವರ ಹೆಸರಿನಲ್ಲಿರುವ ಮನೆ ಆಸ್ತಿಯನ್ನು ಪ್ರಸ್ತುತ ದಾವೆಯಲ್ಲಿ ಸೇರ್ಪಾಟು ಮಾಡಬೇಕೆಂದು ಹಾಕಿರುವ ಅರ್ಜಿ 3 ಸಾವಿರ ರೂಪಾಯಿಗಳ ವೆಚ್ಚದೊಂದಿಗೆ ದಿನಾಂಕ 29-06-2016 ರಂದು ವಜಾಗೊಂಡಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅರ್ಜಿಯ ಮೇಲೆ ಆದೇಶವನ್ನು ಪ್ರಶ್ನಿಸಿದ್ದೆವೋ ಇಲ್ಲೋ ನನಗೆ ಗೊತ್ತಿಲ್ಲ. ನನಗೆ ನನ್ನ ತಾಯಿಯ ಪರವಾಗಿ ಸಾಕ್ಷ್ಯ ನುಡಿಯಲು ಅಧಿಕಾರವಿಲ್ಲ ಕೇವಲ ಅವರ ಪರವಾಗಿ ದಾವೆ ನಡೆಸಲು ಅಧಿಕಾರವಿದೆಯೆಂದರೆ ಸರಿಯಲ್ಲ.

7. ಜಮೀನುಗಳಲ್ಲಿ ಸರ್ವೇ ನಂ.54/4 ವಿಸ್ತೀರ್ಣ 1 ಎಕರೆ 19 ಗುಂಟೆ ಮಾತ್ರ ವಿಭಾಗಕ್ಕೆ ಲಭ್ಯವಿರುವುದು ಎಂದರೆ ನಿಜ. ದಾವಾ ಅನುಸೂಚಿ ಆಸ್ತಿ J ಪ್ರತಿವಾದಿ ನಂ.3 ಇವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಈ ರೀತಿ ಸ್ವಯಾರ್ಜಿತ ಆಸ್ತಿ ಇರುವ ಕಾರಣವೇ ನನ್ನ ತಾತನವರು ಮಾಡಿಕೊಂಡಿರುವ ವಿಭಾಗ ಪತ್ರದಲ್ಲಿ ಈ ಆಸ್ತಿ ಸೇರಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿ ವತ್ಸಲಾ ಅವರು ಖರೀದಿ ಮಾಡಿದ್ದಕ್ಕೆ ನನ್ನ ತಾತ, ಮಾವ ಅಥವಾ ನನ್ನ ತಾಯಿ ಧನ ಸಹಾಯ ಮಾಡಿದ್ದಾರೋ ಇಲ್ಲೋ ನನಗೆ ಗೊತ್ತಿಲ್ಲ. ಸದರಿ ವತ್ಸಲಾ ತನ್ನ ಮದುವೆಯಲ್ಲಿ ಅವರ ತಂದೆ ತಾಯಿಗಳು ನೀಡಿರುವ ಒಡವೆಗಳನ್ನು ಮಾರಾಟ ಮಾಡಿ ಖರೀದಿ ಮಾಡಿರುವ ಆಸ್ತಿ ಇರುವ ಕಾರಣ, ಸದರಿ ಆಸ್ತಿ ವಿಭಾಗಕ್ಕೆ ಲಭ್ಯವಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ನನ್ನ ಅಜ್ಜಿ ಮತ್ತು ತಾತ ಬೆಂಗಳೂರಿನಲ್ಲಿ ಯಾವ ಇಸವಿಯಿಂದ ವಾಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಅವರ ಜೊತೆ ನಾವು ವಾಸವಿದಿದ್ದು ನನಗೆ ನೆನಪಿಲ್ಲ. ಸದರಿ ಆಸ್ತಿಯನ್ನು ನಾನು ನೋಡಿಲ್ಲ.

ವಾಟೀ ಸವಾಲುಃ ಪ್ರತಿವಾದಿ ನಂ. 2 ಶ್ರೀ ಕೆ ಎನ್ ಎಂ ಪರ ವಕೀಲರಿಂದಃ ಸದರಿ ವಕೀಲರು ಹಾಜರಿದ್ದು ಅವರ ಪರವಾಗಿ ವಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.

**ಮರುವಿಚಾರಣೆಃ ಇಲ್ಲ**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**